**ಸಾಕ್ಷಿಯನ್ನು ಇಂದು ದಿನಾಂಕ: 12-01-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಮುಂದುವರೆದ ಪಾಟೀ ಸವಾಲು: 3 ನೇ ಪ್ರತಿವಾದಿ ಪರ ವಕೀಲರಿಂದ**

ಜಯವಂತ ಬೆಳಹೂರವರು ನನ್ನ ತಂದೆಯಾಗಬೇಕು. ಅದರಂತೆ 2 ನೇ ಪ್ರತಿವಾದಿ ನನ್ನ ತಮ್ಮನಾಗಬೇಕು. 3 ನೇ ಪ್ರತಿವಾದಿಯು ನನ್ನ ದೊಡ್ಡ ತಮ್ಮನಾದ ಮಹಾದೇವನ ಹೆಂಡತಿ. ಮಹಾದೇವ ಈಗ ತೀರಿಕೊಂಡಿರುತ್ತಾನೆ. 3 ನೇ ಪ್ರತಿವಾದಿ ಮತ್ತು ಮಹಾದೇವನಿಗೆ ಶ್ರಾವಣಿ ಮತ್ತು ಶ್ರಾವ್ಯ ಎಂಬುವವರು ಇಬ್ಬರು ಮಕ್ಕಳು ಇರುತ್ತಾರೆ. ಪ್ರಸ್ತುತ ದಾವೆಯನ್ನು ದಾವಾ ಆಸ್ತಿಯು ನನ್ನ ಆಸ್ತಿಗೆ ಇದ್ದು ಸದರಿ ದಾವಾ ಆಸ್ತಿಯನ್ನು ಮಹಾದೇವನು ತನ್ನ ಹೆಸರಿಗೆ ಮಾಡಿಕೊಂಡಿರುವುದರಿಂದ ದಾವೆಯನ್ನು ಹೂಡಿರುತ್ತೇನೆ. ಪ್ರಸ್ತುತ ದಾವೆಯನ್ನು ನಾನು ಮಹಾದೇವನು ತೀರಕೊಂಡ ನಂತರ ಹೂಡಿರುತ್ತೇನೆಂದರೆ ಹೌದು ಎಂದರೆ ಹೌದು. ಪ್ರಸ್ತುತ ದಾವೆಯಲ್ಲಿ ಮಹಾದೇವನ ಮಕ್ಕಳಾದ ಶ್ರಾವಣಿ ಮತ್ತು ಶ್ರಾವ್ಯ ರನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಹೌದು. ದಾವಾ ಆಸ್ತಿಯಲ್ಲಿ 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ಇಲ್ಲ ಎಂದರೆ ಹೌದು. ಪ್ರಸ್ತುತ ದಾವೆಯಲ್ಲಿ 1 ಮತ್ತು 2 ನೇ ವಾದಿಯರು ನನಗೆ ವಿರೋದವನ್ನು ಮಾಡಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯರನ್ನು ವಿನಾ ಕಾರಣ ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಲಾಗಿದೆ ಎಂದರೆ ಸಾಕ್ಷಿಯು 1 ಮತ್ತು 2 ನೇ ಪ್ರತಿವಾದಿಯರು ಮಹಾದೇವನ ಜೊತೆ ಕೂಡಿ ಇರುವ ಕಾರಣ ಅವರನ್ನು ಪಕ್ಷಗಾರನಾಗಿ ಮಾಡಲಾಗಿದೆ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿ ಸೇರಿ ದಾವಾ ಆಸ್ತಿಯನ್ನು ಮಹಾದೇವನ ಹೆಸರಿಗೆ ಮಾಡಿರುತ್ತಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರ ಜೊತೆ ಇವತ್ತಿಗೂ ನನ್ನ ಸಂಬಂಧ ಚೆನ್ನಾಗಿ ಇರುತ್ತದೆ ಎಂದರೆ ಸರಿಯಲ್ಲ. ನಾನು ಬನಹಟ್ಟಿಗೆ ಬಂದಾಗ ನಾನು, 1 ಮತ್ತು 2 ನೇ ಪ್ರತಿವಾದಿಯರು ಒಂದೇ ಮನೆಯಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ 1 ಮತ್ತು 2 ನೇ ಪ್ರತಿವಾದಿಯರು ಸೇರಿ ದಾವಾ ಆಸ್ತಿಯನ್ನು ಮಹಾದೇವನ ಹೆಸರಿಗೆ ಮಾಡಿರುತ್ತಾರೆಂದು ಬರೆಸಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯರ ವಿರುದ್ಧ ಈ ದಾವೆಯಲ್ಲಿ ನಾನು ಯಾವುದೇ ತರಹದ ಆರೋಪ ಮಾಡಿರುವುದಿಲ್ಲ ಎಂದರೆ ಸರಿ. ಆ ಕಾರಣಕ್ಕಾಗಿ 1 ಮತ್ತು 2 ನೇ ಪ್ರತಿವಾದಿಯರ ಈ ದಾವೆಗೆ ಸರಿಯಾದ ಪಕ್ಷಗಾರರು ಅಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ 1 ಮತ್ತು 2 ನೇ ಪ್ರತಿವಾದಿಯರ ಜೊತೆ ಕೂಡಿರುತ್ತಾರೆಂದರೆ ಹೌದು. ನನ್ನ ತಾಯಿಯನ್ನು ಈ ದಾವೆಯಲ್ಲಿ ಪಾಟಿ ಮಾಡಿರುವುದಿಲ್ಲ ಎಂದರೆ ಹೌದು.

ಪ್ರಸ್ತುತ ದಾವಾ ಆಸ್ತಿ ನಂ. 41 ಇರುತ್ತದೆ ಆದರೆ ಸದರಿ ಆಸ್ತಿಯ ಪಿಎಂಸಿ ನಂಬರ ನನಗೆ ಗೊತ್ತಿಲ್ಲ. ಸದರಿ ನಿವೇಶನ ಸಂಖ್ಯೆ 41 ರ ವಿಸ್ತೀರ್ಣ ನನಗೆ ಎಷ್ಟಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ನಾನು ವಿರುಪಾಕ್ಷಪ್ಪ ಕೊಳಕಿ ಎಂಬುವವರಿಂದ ಖರೀದಿ ಮಾಡಿರುತ್ತೇನೆ. ಸದರಿ ನಿವೇಶನ ಯಾವ ಸರ್ವೆ ನಂಬರಿನ ನಿವೇಶನ ಎಂದು ನನಗೆ ಗೊತ್ತಿಲ್ಲ. ಸದರಿ ನಿವೇಶನ ಸಂಖ್ಯೆ 41 ರ ಚೆಕ್ಕಬಂದಿ ನನಗೆ ನಿಖರವಾಗಿ ನೆನಪಿಲ್ಲ. ಸದರಿ ಖರೀದಿ ಪತ್ರ 1997 ನೇ ಇಸ್ವಿಯಲ್ಲಿ ಆಗಿರುತ್ತದೆ. ಸದರಿ ಖರೀದಿ ಪತ್ರಕ್ಕೆ ಸಾಕ್ಷಿದಾರರು ಯಾರು ಇದ್ದರೂ ಎಂದು ನೆನಪಿಲ್ಲ. ಸದರಿ ಖರೀದಿಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಖರೀದಿ ಪತ್ರದಲ್ಲಿ ಆಸ್ತಿಯ ಮುನಿಸಿಪಾಲಟಿ ನಂಬರ ಬರೆದಿದ್ದ ಕುರಿತು ನನಗೆ ಗೊತ್ತಿಲ್ಲ. ಕಾರಣ ನನಗೆ ಓದಲು ಬರವುದಿಲ್ಲ.

ಪುರಸಭೆಯಲ್ಲಿ ನಮ್ಮ ನಿವೇಶನದ ಸಂಖ್ಯೆ ಯಾವಾಗ ದಾಖಲೆ ಯಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಪುರಸಭೆಯಿಂದ ಸದರಿ ನಿವೇಶನ ನನ್ನ ಹೆಸರಿಗೆ ದಾಖಲಾಗಿದ್ದ ಕುರಿತು ಯಾವದೇ ದಾಖಲಾತಿಯನ್ನು ನಾನು ತೆಗೆದುಕೊಂಡಿರುವುದಿಲ್ಲ. ಪುರಸಭೆಯಲ್ಲಿ ಸದರಿ ಆಸ್ತಿ ಮಹಾದೇವನ ಹೆಸರಿಗೆ ಯಾವಾಗ ಆಗಿರುತ್ತದೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಸದರಿ ನಿವೇಶನಕ್ಕೆ ನಾನು ಯಾವುದೇ ಹದ್ದು ಬಸ್ತು ಮಾಡಿಕೊಂಡಿರುವುದಿಲ್ಲ. ಸದರಿ ನಿವೇಶವವು ಯಾವ ರಸ್ತೆಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ನಿವೇಶನವನ್ನು ನಾನು ಖರೀದಿಸಿದಾಗಿನಿಂದಲೂ ಯಾವ ಕಾಲಕಾಲಕ್ಕೂ ನಿವೇಶನ ಕಡೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಸದರಿ ನಿವೇಶನ ಹತ್ತಿರ ಶಾಲೆ ಇರುತ್ತದೆ. ಸದರಿ ನಿವೇಶನ ಶಾಲೆ ಇರುವುದರ ಕುರಿತು ಖರೀದಿ ಪತ್ರದಲ್ಲಾಗಲಿ ಅಥವಾ ವಾದ ಪತ್ರದಲ್ಲಾಗಲಿ ನಾನು ಬರೆಸಿರುವುದಿಲ್ಲ . ಸದರಿ ನಿವೇಶನದ ಸುತ್ತ ಮುತ್ತ ಯಾರು ಮನೆ ಕಟ್ಟಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯ ಕೇವಲ ಒಬ್ಬರ ಹೆಸರು ಗೊತ್ತಿದ್ದು ಅವರ ಹೆಸರು ಗೌರ್ಿ ಇರುತ್ತದೆ. ಸದರಿ ಗೌರ್ಿ ಅವರ ಮನೆ ಯಾವ ದಿಕ್ಕಿಗೆ ಸದರಿ ನಿವೇಶನ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರಸ್ತುತ ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ದಾವೆಯಲ್ಲಿ ದಾವಾ ಆಸ್ತಿಯ ಚಕ್ಕಬಂದಿಯನ್ನು ಏನು ಬರೆಸಿರುತ್ತೇನೆಂದು ನಾನು ನೋಡಿಲ್ಲ. ಪ್ರಸ್ತುತ ದಾವೆಯ ಮಾಹಿತಿ ನಾನೇ ಕೊಟ್ಟಿರುತ್ತೇನೆ. ನಾನು ದಾವಾ ಆಸ್ತಿಯನ್ನು ಖರೀದಿ ತೆಗೆದುಕೊಳ್ಳುವಾಗ ದಾವಾ ಆಸ್ತಿಗೆ ಮುನಿಸಿಪಾಲಟಿ ನಂಬರ ಇದ್ದ ಕುರಿತು ನನಗೆ ಗೊತ್ತಿಲ್ಲ. ಪುರಸಭೆಯಲ್ಲಿ ದಾವಾ ಆಸ್ತಿಯು ಮಹಾದೇವನ ಹೆಸರಿಗೆ ಯಾವಾಗ ಆಗಿರುತ್ತದೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಯಾವ ಆಧಾರದ ಮೇಲೆ ದಾವಾ ನಿವೇಶನವು ಮಹಾದೇವನ ಹೆಸರಿಗೆ ಆಗಿರುತ್ತದೆ ಎಂದು ಪುರಸಬೆಯಲ್ಲಿ ನಾನು ವಿಚಾರಿಸಿರುವುದಿಲ್ಲ. ದಾವಾ ನಿವೇಶನವು ಮಹಾದೇವನ ಹೆಸರಿಗೆ ಆಗಿದ್ದರ ಕುರಿತು ಮಹಾದೇವನು ಜೀವಂತ ಇರುವಾಗಲೆ ನನಗೆ ಗೊತ್ತಿತ್ತು. ಮಹಾದೇವನಿಗೆ ನಾನು ಯಾವುದೇ ನೋಟೀಸ ಕೊಟ್ಟಿರುವುದಿಲ್ಲ. ಸಾಕ್ಷಿಯು ಮುಂದುವರೆದು ಮಹಾದೇವನು ಸತ್ತ ನಂತರ ನಾವು ಪುರಸಬೆ ಕರ ತುಂಬಲು ಹೋದಾಗ ಗೊತ್ತಾಯಿತು. 1997 ನೇ ಇಸ್ವಿಯಲ್ಲಿ ದಾವಾ ಆಸ್ತಿಯನ್ನು ಖರೀದಿ ಹಿಡಿದಾಗಿನಿಂದ ಮಹಾದೇವನು ಸಾಯುವ ತನಕ ನಾನು ಸದರಿ ಖರೀದಿ ಕುರಿತು ಚೌಕಾಸಿ ಮಾಡಿರುವುದಿಲ್ಲ. ಸದರಿ ಕರ ಪ್ರತಿವರ್ಷ ತುಂಬ ಬೇಕಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಮುನಿಸಿಪಾಲಿಟಿ ತುಂಬು ಬೇಕಾಗುತ್ತದೆ ಯಾರು ಹೇಳಿರುತ್ತಾರೆ ಎಂಬ ಪ್ರಶಶ್ನೆಗೆ ಸಾಕ್ಷಿಯು ನಾನು ತುಂಬಲು ಹೋಗಿರುತ್ತೇನೆ ಯಾರು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಮುನಿಸ್ಸಿಪಾಲಟಿಗೆ ಕರ ತುಂಬಲು ಹೋದಾಗ ಎಷ್ಟು ವರ್ಷದ ಕರ ತುಂಬಿದ್ದರ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಯು ಸದರಿ ಕರ ತುಂಬಲು ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ಎಷ್ಟು ವರ್ಷದ ಕರ ಬಾಕಿ ಇರುತ್ತದೆ ಎಂದು ನನ್ನ ತಂದೆ ನನಗೆ ಹೇಳಿರುವುದಿಲ್ಲ. ಪುರಸಬೆ ಯವರು ಸಹ ಬಾಕಿ ಕರದ ಕುರಿತು ನನಗೆ ಹೇಳಿರುವುದಿಲ್ಲ. ಮಹಾದೇವನತೀರಿಕೊಂಡ ನಂತರ ಪುರಸಬೆ ನಾನು ಕರ ತುಂಬಲು ಹೋದಾಗ ದಾವಾ ಆಸ್ತಿ ಮಹಾದೇವನ ಹೆಸರಿಗೆ ಆಗಿದ್ದರ ಕುರಿತು ಗೊತ್ತಾಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2007-08 ನೆ ಇಸ್ವಿಯಲ್ಲಿ ನನ್ನ ಕಬೂಲಿ ಪ್ರಕಾರ ದಾವಾ ಆಸ್ತಿಗೆ ಮುನಿಸಿಪಾಲಿಟಗೆ ಮಹಾದೇವನ ಹೆಸರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಪುರಸಬೆ ಗೆ ದಾವಾ ಆಸ್ತಿಯನ್ನು ಮಹಾದೇವನ ಹೆಸರಿಗೆ ಹಚ್ಚಿರುತ್ತೀರಿ ಎಂದು ಕೇಳಿ ನೋಟೀಸನ್ನು ನೀಡಿರುವುದಿಲ್ಲ. ಈ ಕುರಿತು ನಾನು ಪುರಸಬೆ ಯವರ ವಿರುದ್ದ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ. ನನ್ನ ವಾದ ಪತ್ರದಲ್ಲಿ ಪುರಸಬೆಯವರಿಗೆ ನೋಟಿಸನ್ನು ನೀಡಿರುತ್ತೇನೆಂದು ಬರೆಸಿರುದಿಲ್ಲ. ಪ್ರಸ್ತುತ ದಾವೆ ಹೂಡುವ ಪೂರ್ವದಲ್ಲಿ ನಾನು ವಕೀಲರಿಗೆ ಪುರಸಬೆಯವರಿಗೆ ನೋಟಿಸನ್ನು ನೀಡಲು ಯಾವುದೇ ಮಾಹಿತಿಯನ್ನು ಕೊಟ್ಟಿರುವುದಿಲ್ಲ. 3 ನೇ ಪ್ರತಿವಾದಿಯು

ಸಹ ನಾನು ಯಾವ ಕಾಲಕ್ಕೂ ಯಾವುದೇ ನೋಟಿಸನ್ನು ನೀಡಿರುವುದಿಲ್ಲ. ಅದರಂತೆ ಮಹಾದೇವನ ಜೀವಿತ ಕಾಲದಲ್ಲಿ ಮಹಾದೇವನಿಗೆ ಯಾವುದೆ ನೋಟಿಸು ಅಥವಾ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ. ಮಹಾದೇವನು ನನ್ನ ಪ್ರೀತಿಯ ತಮ್ಮನಾಗಿದ್ದ ಎಂದರೆ ಹೌದು. ಆದ ಕಾರಣ ನಾನೆ ಸ್ವತ 2007-08 ನೇ ಇಸ್ವಿ ಪೂರ್ವದಲ್ಲಿ ಸದರಿ ದಾವಾ ಆಸ್ತಿಯನ್ನು ಹಕ್ಕನ್ನು ಬಿಟ್ಟು ಕೊಟ್ಟು ದಾವಾ ಆಸ್ತಿಯನ್ನು ಮಹದೇವನ ಹೆಸರಿಗೆ ಮಾಡಿಸಿರುತ್ತೇನೆಂದರೆ ಸರಿಯಲ್ಲ. ಮಹಾದೇವನ ಸಾವು ಸಂಶಯಸ್ಪಾದ ಇರುತ್ತದೆ ಎಂದು 3 ನೇ ಪ್ರತಿವಾದಿ ನಮ್ಮ ವಿರುದ್ದ ಪ್ರಕರಣವನ್ನು ದಾಖಲು ಮಾಡಿರುತ್ತಾರೆಂದರೆ ಹೌದು. ಸದರಿ ಪ್ರಕರಣವನ್ನು 3 ನೇ ಪ್ರತಿವಾದಿಗೆ ಹಿಂಪಡೆದುಕೊಳ್ಳಲು ಒತ್ತಾಯ ಮಾಡಿರುತ್ತೇವೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಮೇಲೆ ಒತ್ತಡ ಹೇರುವ ಸಲುವಾಗಿ ಪ್ರಸ್ತುತ ಸುಳ್ಳು ದಾವೆಯನ್ನು ಹೂಡಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

Sd/-
ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬನಹಟ್ಟಿ